REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

# ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 | ಸಂಚಿಕೆ : 16 | ಜುಲೈ 26, 2023 | ಬುಧವಾರ | ಪುಟಗಳು : 8 | ಬೆಲೆ : 2/-

## ಸಹಕಾರ ಸಂಘಗಳ ಕಾಯಿದೆ ಮತ್ತು ಕಾನೂನಿನ ತಿದ್ದುಪಡಿ ಶಿಫಾರಸ್ಸಿಗೆ ಸಲಹಾ ಸಮಿತಿ : ಸಮಿತಿಯ ಅಧ್ಯಕ್ಷರಾಗಿ ಶಾಸಕ ಲಕ್ಷ್ಮಣ ಸವದಿ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರ ಸಂಘಗಳ ಕಾಯ್ದೆ 1997 ಮತ್ತು ನಿಯಮಗಳು 2004 ಈ ಎರಡು ಕಾಯ್ದೆಗಳಿಗೂ ಪ್ರಸ್ತುತ ಇರುವ ಪರಿಸ್ಥಿತಿಗನುಗುಣವಾಗಿ ಕಾನೂನಾತ್ಮಕ ತಿದ್ದುಪಡಿ ತರುವ ಸಂಬಂಧ ಸಮಿತಿಯೊಂದನ್ನು ರಚಿಸಿ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಇತ್ತೀಚಿನ ದಿನಗಳಲ್ಲಿ ಸಹಕಾರ ಇಲಾಖೆಯ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳಲ್ಲಿ ಹಾಗೂ ಸೌಹಾರ್ದ ಸಹಕಾರಿಗಳಲ್ಲಿ ಅನೇಕ ಹಣ ದುರುಪಯೋಗದ ಹಗರಣಗಳು ಬೆಳಕಿಗೆ ಬರುತ್ತಿದ್ದು, ಈ ಹಣ ದುರುಪಯೋಗವಾದ ಸಂಘಗಳಲ್ಲಿ ಠೇವಣಿ ಹೂಡಿಕೆ ಮಾಡಿದ ಠೇವಣಿದಾರರಿಗೆ ವಂಚನೆಯಾಗುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಅಲ್ಲದೆ, ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿಯೂ ಸಹ ಜ್ಯೇಷ್ಠತಾ ಪಟ್ಟಿಯನ್ನು ಸರಿಯಾಗಿ ಪಾಲನೆ ಮಾಡದೆ ಹಿರಿಯ ಸದಸ್ಯರನ್ನು ಕಡೆಗಣಿಸಿ, ಆಡಳಿತ ಮಂಡಳಿಯವರು ಕಾನೂನುಬಾಹಿರವಾಗಿ ನಿವೇಶನಗಳನ್ನು ಹಂಚಿಕೆ ಮಾಡುತ್ತಿದ್ದು ಹಾಗೂ ಸಂಘದ ಹಣವನ್ನು ದುರ್ಬಳಕೆ ಮಾಡಿ ಆರ್ಥಿಕ ನಷ್ಟ ಉಂಟು ಮಾಡಿರುವ ಬಗ್ಗೆ ಕ್ರಮಕೈಗೊಳ್ಳಲು ಸರ್ಕಾರಕ್ಕೆ ದೂರುಗಳು ಸ್ವೀಕೃತವಾಗುತ್ತಿರುತ್ತವೆ. ಈ ಅಂಶಗಳ ಹಿನ್ನೆಲೆಯಲ್ಲಿ ಸಹಕಾರ ಕಾಯಿದೆ ಹಾಗೂ ಕಾನೂನಿನಲ್ಲಿ ಸೂಕ್ತ ಬದಲಾವಣೆ ತರಬೇಕಾಗಿರುತ್ತದೆ ಎಂದು ತಿಳಿಸಲಾಗಿದೆ.

ಈಗಿರುವ ಸಹಕಾರ ಕಾಯಿದೆ ಹಾಗೂ ಕಾನೂನಿಗೆ ತಿದ್ದುಪಡಿ ತರುವ ಸಂಬಂಧ ಅಧ್ಯಯನ ನಡೆಸಿ, ವರದಿಯನ್ನು ಸಲ್ಲಿಸಲು ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಜ್ಞಾನ ಮತ್ತು ಅನುಭವವುಳ್ಳ ಸದಸ್ಯರನ್ನು ಆಯ್ಕೆ ಮಾಡಲಾಗಿದೆ.

- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, ಮಾನ್ಯ ಶಾಸಕರು, ಅಥಣಿ ವಿಧಾನಸಭಾ ಕ್ಷೇತ್ರ, ಬೆಳಗಾವಿ ಜಿಲ್ಲೆ – ಸಮಿತಿ ಅಧ್ಯಕ್ಷರು
- ಶ್ರೀ ಜಿ.ಟಿ. ದೇವೇಗೌಡ, ಮಾನ್ಯ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ, ಮೈಸೂರು ಜಿಲ್ಲೆ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು – ಸಮಿತಿ ಸದಸ್ಯರು
- ಶ್ರೀ ಎಸ್.ಆರ್. ಪಾಟೀಲ್, ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಅಧ್ಯಕ್ಷರು, ಬೀಳಗಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೀಳಗಿ, ಬಾಗಲಕೋಟೆ ಜಿಲ್ಲೆ – ಸಮಿತಿ ಸದಸ್ಯರು
- ಶ್ರೀ ಅರೆಬೈಲ್ ಶಿವರಾಮ್ ಹೆಬ್ಬಾರ್, ಮಾನ್ಯ ಶಾಸಕರು, ಯಲ್ಲಾಪುರ ವಿಧಾನಸಭಾ ಕ್ಷೇತ್ರ, ಉತ್ತರ ಕನ್ನಡ ಜಿಲ್ಲೆ – ಸಮಿತಿ ಸದಸ್ಯರು



- ಶ್ರೀ ಕೆ. ಷಡಕ್ಷರಿ, ಮಾನ್ಯ ಶಾಸಕರು, ತಿಪಟೂರು ವಿಧಾನಸಭಾ ಕ್ಷೇತ್ರ, ತುಮಕೂರು ಜಿಲ್ಲೆ – ಸಮಿತಿ ಸದಸ್ಯರು
- ಶ್ರೀ ಎಂ.ಎನ್. ರಾಜೇಂದ್ರಕುಮಾರ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು ಹಾಗೂ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ದಕ್ಷಿಣಕನ್ನಡ ಜಿಲ್ಲೆ – ಸಮಿತಿ ಸದಸ್ಯರು
- ಶ್ರೀ ರಾಜೇಂದ್ರ ರಾಜಣ್ಣ, ಮಾನ್ಯ ವಿಧಾನ ಪರಿಷತ್ ಸದಸ್ಯರು, ತುಮಕೂರು ಜಿಲ್ಲೆ – ಸಮಿತಿ ಸದಸ್ಯರು
- ಶ್ರೀ ಜಿ.ಎಸ್. ರಮಣರೆಡ್ಡಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) – ಸಮಿತಿ ಸದಸ್ಯರು
- ಶ್ರೀ ಹೆಚ್.ಎಸ್. ನಾಗರಾಜಯ್ಯ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ) – ಸಮಿತಿ ಸದಸ್ಯರು
- ಶ್ರೀ ಎ.ಸಿ. ದಿವಾಕರ್, ಸಹಕಾರ ಸಂಘಗಳ ಅಪರ ನಿಬಂಧಕರು (ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ) – ಸದಸ್ಯ ಕಾರ್ಯದರ್ಶಿ

ಅಧ್ಯಯನ ಸಮಿತಿಯು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕ ವಾಗುವಂತೆ ಕಾಲಕಾಲಕ್ಕೆ ಸಭೆಗಳನ್ನು ನಡೆಸಿ, ಅವಶ್ಯವಿದ್ದಲ್ಲಿ ಹೊರ ರಾಜ್ಯದ ಸಹಕಾರ ಕ್ಷೇತ್ರದ ಕಾಯ್ದೆ ಮತ್ತು ಕಾನೂನುಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಮೂರು ತಿಂಗಳೊಳಗಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ದಾಖಲೆಯ ಮಟ್ಟಕ್ಕೆ ಕ್ರೆಡಿಟ್ ಕಾರ್ಡ್ ಬಳಕೆ ವೈಯಕ್ತಿಕ ಸಾಲ ಪಡೆಯುವಿಕೆ ಕೂಡ ಹೆಚ್ಚಳ 2

ದಿ ಪಾಚ್ಛಾಪೂರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : 6ನೇ ಶಾಖೆಯ ಉದ್ಘಾಟನೆ 4

ನಿಮ್ಮ ಪ್ರಶ್ನೆ ನಮ್ಮ ಉತ್ತರ 7

## ಸಂಪಾದಕೀಯ

## ಅತ್ಮೀಯ ಸಹಕಾರಿಗಳೇ...



### ಆರ್ಥಿಕ ಸೂಪರ್ ಶಕ್ತಿಯಾಗಬೇಕಿದ್ದರೆ, ಮೊದಲು ದೇಶದಲ್ಲ ಶಾಂತಿ, ಸೌಹಾರ್ದದ ವಾತಾವರಣ ಅಗತ್ಯ

2030ರ ಹೊತ್ತಿಗೆ ನಮ್ಮ ದೇಶ ಜಗತ್ತಿನ ಬಲಿಷ್ಠ ಆರ್ಥಿಕತೆಯ ಸೂಪರ್ ಪವರ್ ಶಕ್ತಿಯಾಗಿ ಹೊರ ಹೊಮ್ಮಲಿದೆ ಎನ್ನುವ ಮಾತುಗಳು ಇತ್ತೀಚಿನ ಕೆಲ ವರ್ಷಗಳಿಂದ ಕೇಳಿ ಬರುತ್ತಿದೆ. ನಮ್ಮ ಪ್ರಧಾನ ಮಂತ್ರಿಗಳೇ ಹಲವಾರು ಬಾರಿ ದೇಶ, ವಿದೇಶದ ವೇದಿಕೆಗಳ ಮೇಲಿಂದ ಈ ಮಾತುಗಳನ್ನು ಹೇಳುತ್ತಲೇ ಇರುವುದನ್ನು ಕೇಳಿರುತ್ತಿರಿ. ಅವರು ತಮ್ಮ ಬಜೆಟ್ ಭಾಷಣದಲ್ಲೇ ಮುಂದಿನ ದಿನಗಳಲ್ಲಿ ದೇಶದ ಆರ್ಥಿಕತೆ 5 ಟ್ರಿಲಿಯನ್ ಡಾಲರ್ ಇರಲಿದೆ ಎಂದು ಕೆಲ ವರ್ಷಗಳ ಹಿಂದೆಯೇ ಅವರು ಹೇಳಿದ್ದರು. ಸರಿಯೇ, ನಮ್ಮ ದೇಶ ಜಗತ್ತಿನ ಸೂಪರ್ ಪವರ್ ಶಕ್ತಿಯಾಗಲಿದೆ ಎನ್ನುವುದು ನಮ್ಮೆಲ್ಲರಲ್ಲೂ ಹೆಮ್ಮೆ, ಪುಳಕವುಂಟು ಮಾಡುವ ಮಾತುಗಳಾಗಿವೆ ಸಂಭ್ರಮಿಸೋಣ.

ಆದರೆ, ಈ ವಿಚಾರದಲ್ಲಿ ಆರ್ಥಿಕ ತಜ್ಞರ ಅಭಿಪ್ರಾಯ ಬೇರೆಯದೆ ಆದ ರೀತಿಯಲ್ಲಿವೆ. ಅವರ ಪ್ರಕಾರ, ನಮ್ಮ ದೇಶ 2030ರ ವೇಳೆಗೆ ಜಗತ್ತಿನ ಸೂಪರ್ ಪವರ್ ಆಗಬೇಕಿದ್ದರೆ ದೇಶದ ವಾರ್ಷಿಕ ಅಭಿವೃದ್ಧಿ ದರ ಶೇ.10%ರಷ್ಟು ಇದ್ದಲ್ಲಿ ಮಾತ್ರ ಸಾಧ್ಯ ಎನ್ನುವುದು. ನೋಡಿ, ಕಳೆದ 70 ವರ್ಷಗಳಲ್ಲೇ ಕಾಣದ ಆರ್ಥಿಕ ಕುಸಿತ ಈಗ ಕಂಡು ಬರುತ್ತಿದೆ. ಅತಿಯಾದ ಹಣದುಬ್ಬರ, ಕ್ಷೀಣಿಸುತ್ತಿರುವ ಬೇಡಿಕೆಗಳು, ಉತ್ಪಾದನಾ ವಲಯದ ಕಳಪೆ ಸಾಧನೆ, ಜಾಗತಿಕ ದೃಷ್ಟಿಕೋನದ ಕೊರತೆ, ಖಾಸಗಿ ಕ್ಷೇತ್ರದ ಉತ್ಪಾದನೆಯಲ್ಲಿ ಕುಸಿತ ಇತ್ಯಾದಿ ಕಾರಣಗಳಿಂದ ಜಿಡಿಪಿ ಬೆಳವಣಿಗೆ ಕುಂಠಿತಗೊಂಡಿದೆ.

ಒಂದೆಡೆ ಹಣದುಬ್ಬರದ ಸಮಸ್ಯೆಯಿಂದ ಜನ ಸಾಮಾನ್ಯರು ತತ್ತರಿಸಿದ್ದರೆ, ಮತ್ತೊಂದೆಡೆ, ಜಾಗತಿಕ ಮಟ್ಟದಲ್ಲಿ ಡಾಲರ್ ಎದುರು ಸತತವಾಗಿ ರೂಪಾಯಿ ಭಾರಿ ಪ್ರಮಾಣದ ಕುಸಿತ ಕಾಣುತ್ತಿದೆ. ಪ್ರಸ್ತುತ ಒಂದು ಡಾಲರಿಗೆ ನಾವು ಬರೋಬ್ಬರಿ 82 ರೂಪಾಯಿ ತೆರಬೇಕಾಗಿ ಬಂದಿದೆ. ಇನ್ನೊಂದೆಡೆ, ದೇಶದ ಬಹುತೇಕ ಎಲ್ಲ ಉತ್ಪಾದನಾ ವಲಯಗಳು ಹಿಂದೆಂದೂ ಕಾಣದ ಕೆಳಮಟ್ಟಕ್ಕೆ ಕುಸಿದಿರುವುದು ಕಂಡುಬರುತ್ತಿದೆ. ಅಲ್ಲದೆ, ಹಣದುಬ್ಬರ ಮಿತಿಮೀರಿರುವುದನ್ನು ಕಾಣುತ್ತಿದ್ದೇವೆ. ಆದರೆ, ಇದನ್ನು ಬಹಿರಂಗವಾಗಿ ಹೇಳುವುದಕ್ಕೆ ಸಧ್ಯದ ಪರಿಸ್ಥಿತಿಯಲ್ಲಿ ಯಾರೂ ಸಿದ್ದರಿಲ್ಲದಿರುವುದು ವಿಪರ್ಯಾಸವಾಗಿ ಕಾಣುತ್ತಿದೆ.

ಮೊದಲನೆಯದಾಗಿ ಆರ್ಥಿಕತೆ ಚೇತರಿಸಿಕೊಳ್ಳಬೇಕಿದ್ದರೆ, ಉದ್ಯಮಗಳು, ವಾಣಿಜ್ಯ ವ್ಯವಹಾರಗಳು ಅಡೆತಡೆಯಿಲ್ಲದೆ ನಡೆಯಬೇಕು. ದೇಶದಲ್ಲಿ ಶಾಂತಿ, ಸೌಹಾರ್ದದತೆಯ, ನೆಮ್ಮದಿಯ ವಾತಾವರಣವಿರಬೇಕು. ಈಗ ನಿತ್ಯವೂ ದೇಶದಲ್ಲಿ ಅಶಾಂತಿ ವಾತಾವರಣವಿರುವುದನ್ನು ಕಾಣುತ್ತಿದ್ದೇವೆ. ಇದರಿಂದಾಗಿಯೇ, ವಿದೇಶಿ ಹೂಡಿಕೆದಾರರು ಇಲ್ಲಿ ಹೂಡಿಕೆಗಳನ್ನು ಮಾಡಲು ಹಿಂಜರಿಯುವ ಪ್ರವೃತ್ತಿ ಕಂಡುಬರುತ್ತಿದೆ.

ಕೇಂದ್ರ ಸರ್ಕಾರ ಮೊದಲಿಗೆ ದೇಶದಲ್ಲಿ ಈಗ ಇರುವ ಭಯಭೀತಿಯ ವಾತಾವರಣ ನಿವಾರಿಸಿ, ಶಾಂತಿಯ ವಾತಾವರಣ ಎಲ್ಲೆಡೆ ನೆಲಸುವಂತ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಎಲ್ಲಕಿಂತ ಮುಖ್ಯವಾಗಿ, ಬಹು ಆಯಾಮಗಳ, ಪರಿಣಾಮಕಾರಿ ಆರ್ಥಿಕ ನೀತಿಯನ್ನು ರೂಪಿಸಿ, ಅದಕ್ಕೆ ತಕ್ಕ ಕ್ರಿಯಾ ಯೋಜನೆ ಸಿದ್ದಪಡಿಸಿಕೊಂಡು ಮುಂದುವರಿದಲ್ಲಿ ಖಂಡಿತ ನಮ್ಮ ದೇಶ ಮುಂದಿನ ದಿನಗಳಲ್ಲಿ ಸೂಪರ್ ಪವರ್ ಶಕ್ತಿಯಾಗಿ ಹೊರಹೊಮ್ಮುವುದರಲ್ಲಿ ಯಾವುದೇ ಅನುಮಾನವಿಲ್ಲ.

▸▸ ಎಚ್.ಕೆ. ಪಾಟೀಲ್

### ದಾಖಲೆಯ ಮಟ್ಟಕ್ಕೆ ಕ್ರೆಡಿಟ್ ಕಾರ್ಡ್ ಬಳಕೆ ವೈಯಕ್ತಿಕ ಸಾಲ ಪಡೆಯುವಿಕೆ ಕೂಡ ಹೆಚ್ಚಳ

**ಮುಂಬೈ :** ದೇಶದಲ್ಲಿ ಕ್ರೆಡಿಟ್ ಕಾರ್ಡ್ ಬಳಸಿ ಮಾಡುವ ವೆಚ್ಚಗಳು ಮೇ ತಿಂಗಳಲ್ಲಿ ರೂ.1.4ಲಕ್ಷ ಕೋಟಿಗೆ ತಲುಪಿವೆ. ಇದು ದಾಖಲೆಯ ಮಟ್ಟ. ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿರುವ ದಾಖಲೆಗಳನ್ನು ಇದನ್ನು ಹೇಳುತ್ತಿವೆ. ಕ್ರೆಡಿಟ್ ಕಾರ್ಡ್ ಬಳಸಿ ಮಾಡುವ ವೆಚ್ಚಗಳ ಮೊತ್ತವು ಕಳೆದ ಹಣಕಾಸು ವರ್ಷದಲ್ಲಿ ಬಹಳ ಏರಿಕೆಯನ್ನೂ ಕಾಣುತ್ತಿರಲಿಲ್ಲ, ತಗ್ಗುತ್ತಲೂ ಇರಲಿಲ್ಲ. ಆದರೆ ಈ ವರ್ಷದಲ್ಲಿ ತಿಂಗಳಿನಿಂದ ತಿಂಗಳಿಗೆ ಶೇ.5ರಷ್ಟು ಏರಿಕೆ ಕಾಣುತ್ತಿದೆ.




ಅದೇ ರೀತಿ, ಚಾಲ್ತಿಯಲ್ಲಿ ಇರುವ ಕ್ರೆಡಿಟ್ ಕಾರ್ಡ್‌ಗಳ ಸಂಖ್ಯೆಯು ಜನವರಿಯ ನಂತರದಲ್ಲಿ 50ಲಕ್ಷಕ್ಕಿಂತ ಹೆಚ್ಚಿನ ಏರಿಕೆ ಕಂಡಿದ್ದು, 8.74ಕೋಟಿಗೆ ತಲುಪಿದೆ. ಇದು ಕೂಡ ದಾಖಲೆಯ ಮಟ್ಟ. ಜನವರಿಯಲ್ಲಿ ದೇಶದಲ್ಲಿ 8.24 ಕೋಟಿ ಕ್ರೆಡಿಟ್ ಕಾರ್ಡ್‌ಗಳು ಬಳಕೆಯಲ್ಲಿ ಇದ್ದವು. 2022–23ನೇ ಹಣಕಾಸು ವರ್ಷದಲ್ಲಿ ಕ್ರೆಡಿಟ್ ಕಾರ್ಡ್ ಬಳಸಿ ಮಾಡಿದ ವೆಚ್ಚಗಳ ಮೊತ್ತವು ರೂ.1.10ಲಕ್ಷ ಕೋಟಿಯಿಂದ ರೂ.1.20ಲಕ್ಷ ಕೋಟಿಯ ನಡುವೆ ಇತ್ತು. ಆದರೆ, ಮೇ ತಿಂಗಳಲ್ಲಿ ದಾಖಲೆಯ ರೂ.1.4ಲಕ್ಷ ಕೋಟಿಗೆ ಹೆಚ್ಚಾಗಿದೆ. ಪ್ರತಿ ಕಾರ್ಡ್ ಬಳಸಿ ಸರಾಸರಿ ರೂ.16,144ರಷ್ಟು ಖರ್ಚು ಮಾಡಲಾಗಿದೆ.

ಕ್ರೆಡಿಟ್ ಕಾರ್ಡ್ ಬಿಲ್‌ಗಳನ್ನು 90 ದಿನಗಳ ನಂತರವೂ ಮರುಪಾವತಿ ಮಾಡದೆ ಇರುವ ಪ್ರಮಾಣವು 2023ರ ಮಾರ್ಚ್ ಅಂತ್ಯಕ್ಕೆ ಶೇ.0.66ರಷ್ಟು ಹೆಚ್ಚಾಗಿದ್ದು ಶೇ.2.94ಕ್ಕೆ ತಲುಪಿದೆ ಎಂದು ಸಾಲಗಳ ಮೇಲೆ ನಿಗಾ ಇರಿಸುವ ಟ್ರಾನ್ಸ್‌ಯೂನಿಯನ್ ಸಿಬಿಲ್ ಹೇಳಿದೆ. ಮರುಪಾವತಿ ಬಾಕಿ ಮೊತ್ತವು ಹೆಚ್ಚುತ್ತ ಇರುವುದು ವೈಯಕ್ತಿಕ ಮಟ್ಟದಲ್ಲಿ ಇರುವ ಹಣಕಾಸಿನ ಒತ್ತಡವನ್ನು ಸೂಚಿಸುತ್ತಿದೆ. ಕ್ರೆಡಿಟ್‌ಕಾರ್ಡ್ ಹೊಂದುವುದು ಹಾಗೂ ವೈಯಕ್ತಿಕ ಸಾಲ ಪಡೆಯುವುದು ಅತ್ಯಂತ ವೇಗದ ಏರಿಕೆ ಕಂಡಿದೆ ಎಂದು ಕೂಡ ಟ್ರಾನ್ಸ್‌ಯೂನಿಯನ್ ಸಿಬಿಲ್ ಹೇಳಿದೆ.

## ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕರನ್ನು ಹೊರತುಪಡಿಸಿ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ (Management Development Programme)ಯನ್ನು ಏರ್ಪಡಿಸಿರುವ ಕುರಿತು

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಐದು ದಿನಗಳ ಉನ್ನತ ಮಟ್ಟದ "ನಿರ್ವಹಣೆ ಅಭಿವೃದ್ಧಿ ತರಬೇತಿ" (Management Development Programme)ಯನ್ನು ಪ್ರಾರಂಭಿಸಲಾಗಿದೆ. ಇತ್ತೀಚೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ಅವುಗಳನ್ನು ಸಮರ್ಥವಾಗಿ ನಿರ್ವಹಿಸಲು ಈ ದೀರ್ಘಾವಧಿಯ ತರಬೇತಿಯನ್ನು ಏರ್ಪಡಿಸಲಾಗಿದೆ. ಈ ಸದರಿ ತರಬೇತಿಯನ್ನು ದಿನಾಂಕ : 31.07.2023 ರಿಂದ ದಿನಾಂಕ : 04.08.2023 ರವರೆಗೆ ಬೆಳಿಗ್ಗೆ 09.00 ಗಂಟೆಯಿಂದ ಸಾಯಂಕಾಲ 05.30 ಗಂಟೆಯವರೆಗೆ ಒಟ್ಟು ಐದು ದಿನಗಳ ಕಾಲ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್ಐಸಿಎಂ) ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು–560 070 ಇಲ್ಲಿ ಏರ್ಪಡಿಸಲಾಗಿದೆ.

ಈ ಮೂರು ದಿನಗಳ ತರಬೇತಿ ಶಿಬಿರದಲ್ಲಿ ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ನೋಂದಾಯಿಸಿದ ಪ್ರತಿನಿಧಿಗಳಿಗೆ ಮಾತ್ರ ಅವಕಾಶವಿರುತ್ತದೆ. ಈ ತರಬೇತಿ ಶಿಬಿರದ ಶುಲ್ಕದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ದಿನಾಂಕ : 28.06.2023ರಂದು ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಬರೆದಿರುವ ಪತ್ರವನ್ನು ತಾವು ತಮ್ಮ ಬ್ಯಾಂಕಿನ ಇ–ಮೇಲ್‌ನಲ್ಲಿ ನೋಡಬಹುದು. ಪ್ರತಿನಿಧಿ ಶುಲ್ಕವನ್ನು ಚೆಕ್ / ಡಿ.ಡಿ ಅಥವಾ ಎನ್ಇಎಫ್‌ಟಿ ಮುಖಾಂತರ ದಿನಾಂಕ : 30.06.2023 ರೊಳಗಾಗಿ ಪಾವತಿಸಿ ಮಹಾಮಂಡಳದಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಅಧಿಕಾರಿಗಳಾದ ಶ್ರೀ ಎನ್. ರಮೇಶ್ (9448003167) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9110642779) ರವರುಗಳನ್ನು ಸಂಪರ್ಕಿಸಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಯವರು ತಿಳಿಸಿರುತ್ತಾರೆ.

## ಸರಕಾರಿ ನೌಕರರ ಸಹಕಾರಿ ಬ್ಯಾಂಕ ನಿ., ವಿಜಯಪುರ : ಅಧ್ಯಕ್ಷರ ಆಯ್ಕೆ



**ವಿಜಯಪುರ :** ದಿನಾಂಕ : 19.07.2023ರಂದು ಸರಕಾರಿ ನೌಕರರ ಸಹಕಾರಿ ಬ್ಯಾಂಕಿನ ಪದಾಧಿಕಾರಿಗಳ ಚುನಾವಣೆಯನ್ನು ಚುನಾವಣಾ ಅಧಿಕಾರಿಯಾಗಿ ಶ್ರೀ ಬಿ.ಎಸ್.ಮಂಟೂರ, ಉಪನಿಬಂಧಕರು ಸಹಕಾರಿ ಸಂಘಗಳ ಕಾರ್ಯಾಲಯ ವಿಜಯಪುರ ಇವರು ಜರುಗಿಸಿದ್ದು, ಅಧ್ಯಕ್ಷ ಸ್ಥಾನಕ್ಕೆ ಶ್ರೀ ಪ್ರಶಾಂತ ಎಸ್. ಚನಗೊಂಡ (ಕಂದಾಯ ಇಲಾಖೆ) ಇವರು ಮುಂದಿನ ಅವಧಿಯವರೆಗೆ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಘೋಷಣೆ ಮಾಡಿದ್ದನ್ನು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಎಮ್.ವ್ಹಿ. ಪರ್ವತಿಯವರು ತಿಳಿಸಿರುತ್ತಾರೆ.

ಉಪಾಧ್ಯಕ್ಷರಾದ ಶ್ರೀ ಅಲ್ಲಾಭಕ್ಷ ಎಮ್. ವಾಲಿಕಾರ ನಿರ್ದೇಶಕರುಗಳಾದ ಶ್ರೀ ಅರವಿಂದ ಭೋ. ಹೂಗಾರ, ಶ್ರೀ ಆಯ್.ಎ. ತೇಲಿ, ಶ್ರೀ ಬಿ.ಎಮ್. ಬಿರಾದಾರ, ಶ್ರೀ ಅರ್ಜುನ ಜಿ. ಲಮಾಣಿ, ಶ್ರೀ ಸುರೇಶ ಶಡಶ್ಯಾಳ, ಶ್ರೀ ಹನಮಂತ ಕೊಣದಿ, ಶ್ರೀಮತಿ ಜಯಶ್ರೀ ಬೆಣ್ಣಿ, ಶ್ರೀ ಸದಾಶಿವ ದಳವಾಯಿ, ಶ್ರೀ ಅಶೋಕ ಚನಬಸಗೋಳ, ಶ್ರೀ ಆನಂದಗೌಡ ಎನ್. ಬಿರಾದಾರ, ಶ್ರೀ ಸಿ.ಟಿ. ಜತ್ತಿ, ಶ್ರೀ ಉಮೇಶ ಗುಡ್ನಾಳ, ಶ್ರೀಮತಿ ನೀಲಾ ಇಂಗಳೆ ಹಾಗೂ ಬ್ಯಾಂಕಿನ ಸದಸ್ಯರುಗಳು, ವ್ಯವಸ್ಥಾಪಕರಾದ ಶ್ರೀ ಎಮ್.ಕೆ. ಜೋಶಿ, ಶ್ರೀ ಸಿ.ಎಸ್. ಹಿರೇಮಠ ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು.

# ದಿ ಪಾಚ್ಛಾಪೂರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : 6ನೇ ಶಾಖೆಯ ಉದ್ಘಾಟನೆ






ದಿ ಪಾಚ್ಛಾಪೂರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 6ನೇ ಶಾಖೆಯನ್ನು ಸಾಂಬ್ರಾ, ಬೆಳಗಾವಿಯಲ್ಲಿ ದಿನಾಂಕ : 14.07.2023ರಂದು ವಿಜ್ರಂಭಣೆಯಿಂದ ಉದ್ಘಾಟಿಸಲಾಯಿತು.

ಸಮಾರಂಭದ ಸಾನಿಧ್ಯವನ್ನು ಶ್ರೀ ಷ.ಬ್ರ.ವಿಶ್ವಾರಾಧ್ಯಾ ಶಿವಾಚಾರ್ಯ ಸ್ವಾಮಿಗಳು ಶ್ರೀ ಉಜ್ಜೇಶ್ವರ ಸಂಸ್ಥಾನ ಹಿರೇಮಠ ಕುಂದರಗಿ ಪಾಚ್ಛಾಪೂರ ಪೂಜ್ಯರು ವಹಿಸಿದ್ದರು ಹಾಗೂ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅಮರನಾಥ ಕ ಮಹಾಜನಶೆಟ್ಟಿ ಅವರು ಹಾಗೂ ಉಪಾಧ್ಯಕ್ಷರಾದ ಶ್ರೀ ಸುರೇಶ ಗಂ ಗುಣಕಿ ಹಾಗೂ ಆಡಳಿತ ಮಂಡಳಿಯ ಎಲ್ಲ ಸದಸ್ಯರು ಹಾಜರಿದ್ದರು. ಅದಲ್ಲದೆ ಸಾಂಬ್ರಾ ಗ್ರಾಮದ ಹಿರಿಯರು ಕೂಡ ಉಪಸ್ಥಿತರಿದ್ದರು.

# ಆಧಾರ್ ಮತ್ತು ಪ್ಯಾನ್‌ನ್ನು ಲಿಂಕ್ ಮಾಡದೇ ಐಟಿಆರ್ ಫೈಲ್ ಮಾಡಿದರೆ ರೂ. 6000ವರೆಗೆ ದಂಡ




**ದೆಹಲಿ :** ಆಧಾರ ಮತ್ತು ಪ್ಯಾನ್‌ನ್ನು ಲಿಂಕ್ ಮಾಡದೇ ಐಟಿಆರ್ ಫೈಲ್ ಮಾಡಿದರೆ 6000 ರೂ.ವರೆಗೆ ದಂಡ ವಿಧಿಸಲಾಗುವುದು ಎಂದು ಹಣಕಾಸು ಇಲಾಖೆ ಎಚ್ಚರಿಕೆ ನೀಡಿದೆ. ಆಧಾರ್‌ನೊಂದಿಗೆ ಪ್ಯಾನ್ ಲಿಂಕ್ ಮಾಡಲು ಈ ವರ್ಷದ ಜೂನ್ 30ರ ತನಕ ಗಡುವು ನೀಡಲಾಗಿತ್ತು. ಒಂದು ವೇಳೆ ಇದನ್ನು ಮಾಡಲು ವಿಫಲರಾದರೆ, ಜುಲೈ 1, 2023ರಂದು ಅವರ ಪ್ಯಾನ್ ಅಮಾನ್ಯವಾಗುತ್ತದೆ ಎಂದು ಹೇಳಲಾಗಿದೆ. ಒಂದು ವೇಳೆ ಪ್ಯಾನ್ ನಿಷ್ಕ್ರಿಯಗೊಂಡರೆ ಪ್ಯಾನ್ ಕಾರ್ಡ್ ಆಧಾರಿತ ಕೆಲವು ಸೇವೆಗಳನ್ನು ಪಡೆಯಲು ತಮ್ಮ ಖಾತೆಗಳನ್ನು ಬಳಸಲು ಸಾಧ್ಯವಾಗುವುದಿಲ್ಲ ಎಂದು ಸೂಚಿಲಾಗಿದೆ.

ಮೇಲಾಗಿ, 2023ರ ಜುಲೈ 31ರ ಮೊದಲು ನಿಮ್ಮ ಆದಾಯ ತೆರಿಗೆ ರಿಟರ್ನ್ (ITR) ಸಲ್ಲಿಸಲು ನಿಮಗೆ ಸಾಧ್ಯವಾಗದೇ ಇರಬಹುದು. ಏಕೆಂದರೆ ITR ಗಡುವು ಒಂದು ತಿಂಗಳಿಗಿಂತ ಕಡಿಮೆಯಿರುತ್ತದೆ. ಒಂದು ವೇಳೆ ಈಗಾಗಲೇ ನೀವೂ ದಂಡ ಪಾವತಿಸಿದ ನಂತರವೂ ಪ್ಯಾನ್ ನಿಷ್ಕ್ರಿಯವಾಗಿದ್ದರೆ, ಅದು ಮತ್ತೆ ಸಕ್ರಿಯವಾಗಲು 30 ದಿನಗಳನ್ನು ತೆಗೆದುಕೊಳ್ಳುತ್ತದೆ ಎಂದು ಹೇಳಲಾಗಿದೆ.

ಒಂದು ವೇಳೆ ಪ್ಯಾನ್ ಕಾರ್ಡ್‌ನಿಂದಾಗಿ ಐಟಿಆರ್ ಫೈಲ್ ಮಾಡುವುದು ತಡವಾದರೆ, ಇದಕ್ಕೂ ಕೂಡ ದಂಡವಿದ್ದು ಸುಮಾರು 5,000 ರೂ. ಕಟ್ಟಬೇಕಾಗುತ್ತದೆ ಎಂಬುದನ್ನು ನೆನಪಿನಲ್ಲಿಡಿ. ಆದ್ದರಿಂದ, ನಿಮ್ಮ PAN ಪ್ರಸ್ತುತ ನಿಷ್ಕ್ರಿಯವಾಗಿದ್ದರೆ ನೀವು 5,000 ರೂಪಾಯಿಗಳ ತಡವಾದ ಫೈಲಿಂಗ್ ಶುಲ್ಕ ಜತೆಗೆ ಪ್ಯಾನ್ ಮತ್ತು ಆಧಾರ್‌ನ್ನು ಲಿಂಕ್‌ಗಾಗಿ 1,000 ರೂ. ಶುಲ್ಕವನ್ನು ಪಾವತಿಸಬೇಕಾಗುತ್ತದೆ.

ತಮ್ಮ ಆಧಾರ್‌ನ್ನು ಪ್ಯಾನ್‌ನೊಂದಿಗೆ ಲಿಂಕ್ ಮಾಡದ ತೆರಿಗೆದಾರರು ಆದಷ್ಟು ಬೇಗ ಮಾಡಬೇಕು. ತಮ್ಮ ಆದಾಯ ತೆರಿಗೆ ರಿಟರ್ನ್‌ಗಳನ್ನು ನಿಗದಿತ ದಿನಾಂಕದೊಳಗೆ ಅಂದರೆ 31 ಜುಲೈ 2023 ರೊಳಗೆ ಸಲ್ಲಿಸಬೇಕು ಎಂದು ಶಿಫಾರಸು ಮಾಡಲಾಗಿದೆ. ಜುಲೈ 31 ರೊಳಗೆ ತಮ್ಮ ಆದಾಯ ತೆರಿಗೆ ರಿಟರ್ನ್‌ಗಳನ್ನು ಸಲ್ಲಿಸಲು ಸಾಧ್ಯವಾಗದ ತೆರಿಗೆದಾರರು 31ನೇ ಡಿಸೆಂಬರ್ 2023ರವರೆಗೆ ತಡವಾದ ರಿಟರ್ನ್‌ಗಳನ್ನು ಸಲ್ಲಿಸಬಹುದು.

# ಸಹಕಾರ ಚುನಾವಣಾ ಪ್ರಾಧಿಕಾರ

3ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್, ಶಾಂತಿನಗರ, ಬೆಂಗಳೂರು–560027

ಸಂಖ್ಯೆ:ಸಚುಪ್ರಾ/ಆಡಳಿತ/39/ಸ.ಸ.&ಸೌ.ಸ.ಕಾ/ತಿದ್ದುಪಡಿ/ಸುತ್ತೋಲೆ/2021–22 ದಿನಾಂಕ : 17–07–2023

## "ಸುತ್ತೋಲೆ"

**ವಿಷಯ : ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ ರನ್ವಯ ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ ತಿದ್ದುಪಡಿಯಾಗಿರುವ ಬಗ್ಗೆ.**

**ಉಲ್ಲೇಖ : 1) ಸರ್ಕಾರದ ಅಧಿಸೂಚನೆ ಸಂ.ಸಿಓ/71/ಸಿಎಲ್‌ಎಂ/2020(ಇ) ದಿನಾಂಕ : 08–12–2020.**

**2) ಈ ಕಛೇರಿ ಪತ್ರ ಸಂ.ಸಚುಪ್ರಾ/ಆಡಳಿತ/39/ತಿದ್ದುಪಡಿ/2020–21 ದಿನಾಂಕ : 29–12–2020.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಅಧಿಸೂಚನೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ ರನ್ವಯ ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ, ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ/ಚುನಾವಣಾಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳ ಕುರಿತು, ಉಪನಿಯಮ (2)ರಲ್ಲಿ **"A (i), (ii), (iii), (iv), (v)** ಮತ್ತು (vi)"ನ್ನು ಹೊಸದಾಗಿ ಸೇರ್ಪಡೆ ಮಾಡಿ ತಿದ್ದುಪಡಿ ಮಾಡಲಾಗಿರುತ್ತದೆ.

ಅದರಂತೆ ಉಲ್ಲೇಖ(2)ರ ಪತ್ರದಲ್ಲಿ, ಸದರಿ ಅಧಿಸೂಚನೆಯನ್ನು ಎಲ್ಲಾ ಚುನಾವಣಾಧಿಕಾರಿಗಳಿಗೆ ಕಳುಹಿಸಿ, ತಿದ್ದುಪಡಿಯನ್ವಯ ಅಗತ್ಯ ಕ್ರಮವಿಡಲು ಸೂಚಿಸಲಾಗಿರುತ್ತದೆ.

ಪ್ರಸ್ತುತ, ಚುನಾವಣೆ ನಿಗಧಿಯಾಗಿರುವ ಕೆಲವು ಸಹಕಾರ ಸಂಘಗಳ ಸದಸ್ಯರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿ, ಸಹಕಾರ ಸಂಘವು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ(2-A) ರನ್ವಯ ಸಂಘದ ಚುನಾವಣೆಗೆ 195 ದಿನಗಳು ಬಾಕಿ ಇರುವಾಗ ಅನರ್ಹ ಸದಸ್ಯರಿಗೆ ನೋಟೀಸು ನೀಡಿ, ಸ್ವೀಕೃತವಾದ ಅಹವಾಲುಗಳನ್ನು ಚುನಾವಣಾಧಿಕಾರಿಗಳಿಗೆ ಸಲ್ಲಿಸಿ, ನಿಯಮಾನುಸಾರ ವಿಚಾರಣೆ ನಡೆಸಿ ವಿಲೇಗೊಳಿಸಲು ಕ್ರಮವಿಡದೇ ಕರಡು/ಅಂತಿಮ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿರುವುದರಿಂದ ಸಹಕಾರ ಸಂಘದ ಚುನಾವಣೆಯಲ್ಲಿ ಮತ ಹಾಕಲು ಅವಕಾಶ ವಂಚಿತರಾಗಿರುವುದರಿಂದ ಅರ್ಜಿದಾರರೆಲ್ಲರಿಗೂ ಸಹಕಾರ ಸಂಘದ ಚುನಾವಣೆಯಲ್ಲಿ ಮತ ಹಾಕಲು ಅವಕಾಶ ನೀಡುವಂತೆ ಮಾನ್ಯ ಉಚ್ಚ ನ್ಯಾಯಾಲಯವನ್ನು ಕೋರಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯವು ಇಂತಹ ಪ್ರಕರಣಗಳಲ್ಲಿ ನೀಡುತ್ತಿರುವ ಮಧ್ಯಂತರ ಆದೇಶದಲ್ಲಿ ಅರ್ಜಿದಾರರೆಲ್ಲರಿಗೂ ಸಹಕಾರ ಸಂಘದ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ನೀಡಿ, ಅವರು ಚಲಾಯಿಸಿರುವ ಮತದಾನದ ಪತ್ರವನ್ನು ಪ್ರತ್ಯೇಕ ಪೆಟ್ಟಿಗೆಯಲ್ಲಿರಿಸಿ, ನ್ಯಾಯಾಲಯದ ಮುಂದಿನ ಆದೇಶದವರೆಗೆ ಚುನಾವಣಾ ಫಲಿತಾಂಶ ಘೋಷಿಸದಿರಲು ನಿರ್ದೇಶನ ನೀಡುತ್ತಿದೆ.

ಮುಂದುವರೆದು ಮಾನ್ಯ ಉಚ್ಚ ನ್ಯಾಯಾಲಯವು ಕೆಲವು ರಿಟ್ ಅರ್ಜಿಗಳಲ್ಲಿ (ಪ್ರಕರಣಗಳಲ್ಲಿ) ಅಂತಿಮ ಆದೇಶದಲ್ಲಿ ಅರ್ಜಿದಾರರೆಲ್ಲರು ಚಲಾಯಿಸಿರುವ ಮತಗಳನ್ನು ಸೇರಿಸಿ ಎಣಿಕೆ ಮಾಡಿ ಚುನಾವಣಾ ಫಲಿತಾಂಶವನ್ನು ಘೋಷಿಸಲು ರಿಟರ್ನಿಂಗ್ ಅಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತದೆ ಹಾಗೂ ಚುನಾವಣಾ ಫಲಿತಾಂಶದಿಂದ ಭಾಧಿತರಾದವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70 ರಡಿ ದಾವೆ ದಾಖಲಿಸಲು ಅವಕಾಶವನ್ನು ನೀಡಿರುತ್ತದೆ.

ನಿಯಮ 3ಡಿ(2-A)ಯನ್ನು ನಿಯಮಾನುಸಾರ ಪಾಲಿಸದೇ ಚುನಾವಣೆ ನಡೆಯುತ್ತಿರುವುದರಿಂದ ಚುನಾವಣಾ ಸಂಬಂಧಿತ ರಿಟ್ ಅರ್ಜಿಗಳು/ದಾವೆಗಳು ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ದಾಖಲಾಗಲು ಅವಕಾಶ ಕಲ್ಪಿಸಿದಂತಾಗಿದೆ ಹಾಗೂ ಸಂಘಗಳ ಚುನಾವಣೆಗಳು ಸರಾಗವಾಗಿ ನಡೆಯಲು ಅಡಚಣೆಯುಂಟಾಗಿರುತ್ತದೆ.

ಈ ಅಂಶಗಳ ಹಿನ್ನೆಲೆಯಲ್ಲಿ ಉಲ್ಲೇಖ(1)ರ ಅಧಿಸೂಚನೆಯನ್ವಯ, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ(2-A)ನ್ನು ಕಡ್ಡಾಯವಾಗಿ ಪಾಲಿಸಿ ಕರಡು/ಅಂತಿಮ ಮತದಾರರ ಪಟ್ಟಿ ಸಿದ್ಧಪಡಿಸಿ ಚುನಾವಣೆ ನಡೆಸಲು ಎಲ್ಲಾ ಚುನಾವಣಾಧಿಕಾರಿಗಳು ಕಟ್ಟುನಿಟ್ಟಿನ ಕ್ರಮವಿಡುವುದು ಹಾಗೂ ತಮ್ಮ ವ್ಯಾಪ್ತಿಯಲ್ಲಿ ಚುನಾವಣೆಗೆ ಬಾಕಿ ಇರುವ ಎಲ್ಲಾ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಈ ಬಗ್ಗೆ ಸೂಚನೆ ನೀಡಲು ನಿರ್ದೇಶನ ನೀಡಿದೆ. ಎಲ್ಲಾ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳು ತಮ್ಮ ವ್ಯಾಪ್ತಿಯಲ್ಲಿರುವ ಎಲ್ಲಾ ಸಹಕಾರ ಸಂಘಗಳಿಗೆ ಈ ಬಗ್ಗೆ ಮಾಹಿತಿ ನೀಡತಕ್ಕದ್ದು.

**ಆಯುಕ್ತರು,**
**ಸಹಕಾರ ಚುನಾವಣಾ ಪ್ರಾಧಿಕಾರ,**
**ಬೆಂಗಳೂರು.**

# ಐಟಿಆರ್ ಸಲ್ಲಿಕೆ ಡೆಡ್‌ಲೈನ್ ಮುಂದೂಡಿಕೆ ಸಂಭವ, ಗಡುವು ವಿಸ್ತರಣೆಗೆ ಆಗ್ರಹ




**ಹೊಸದಿಲ್ಲಿ :** 2022-23ರ ಹಣಕಾಸು ವರ್ಷ ಮತ್ತು 2023-24ರ ಮೌಲ್ಯಮಾಪನ ವರ್ಷಕ್ಕೆ ಆದಾಯ ತೆರಿಗೆ ರಿಟರ್ನ್ಸ್ (ಐಟಿಆರ್) ಸಲ್ಲಿಸಲು ಜು. 30ರ ಗಡುವಿಗೆ ಇನ್ನು ಕೆಲವೆ ದಿನಗಳಷ್ಟೇ ಬಾಕಿ ಉಳಿದಿವೆ. ಈಗಾಗಲೇ 3 ಕೋಟಿಗೂ ಅಧಿಕ ಮಂದಿ ಐಟಿಆರ್ ದಾಖಲಿಸಿದ್ದಾರೆ. ಇನ್ನೂ ಕೋಟ್ಯಂತರ ಜನ ಐಟಿಆರ್ ಸಲ್ಲಿಸಿಲ್ಲ. ಏತನ್ಮಧ್ಯೆ, ಐಟಿಆರ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಲು ಒತ್ತಾಯಗಳು ಕೇಳಿಬಂದಿವೆ.

ದೇಶದ ಹಲವು ರಾಜ್ಯಗಳಲ್ಲಿ ಮಳೆ, ಪ್ರವಾಹದ ಸಮಸ್ಯೆ ಸೃಷ್ಟಿಯಾಗಿದೆ. ಹೀಗಾಗಿ, ಗಡುವನ್ನು ಒಂದು ತಿಂಗಳು ವಿಸ್ತರಿಸುವಂತೆ ದೇಶದ ಅತಿ ದೊಡ್ಡ ತೆರಿಗೆ ವೃತ್ತಿಪರರ ಸಂಸ್ಥೆಯಾದ ಸೇಲ್ಸ್‌ಟ್ಯಾಕ್ಸ್ ಬಾರ್ ಅಸೋಸಿಯೇಷನ್ ಸೇರಿದಂತೆ ತೆರಿಗೆ ಸಂಬಂಧಿಸಿದ ಇತರ ಸಂಸ್ಥೆಗಳು ಒತ್ತಾಯಿಸಿವೆ. ಈ ಸಂಬಂಧ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಪತ್ರ ಬರೆದಿವೆ. "ರಾಜಧಾನಿ ದಿಲ್ಲಿಯಲ್ಲಿ ಪ್ರವಾಹ ಪರಿಸ್ಥಿತಿಯಿಂದಾಗಿ ಐಟಿಒ ಪ್ರದೇಶದಲ್ಲಿರುವ ಆದಾಯ ತೆರಿಗೆ ಸೇರಿದಂತೆ ಹಲವು ಕಚೇರಿಗಳನ್ನು ಮುಚ್ಚಲಾಗಿದೆ. ವಾಸ್ತವವಾಗಿ ಪ್ರವಾಹದ ಸಮಸ್ಯೆ ದಿಲ್ಲಿಗೆ ಮಾತ್ರ ಸೀಮಿತವಾಗಿಲ್ಲ. ಉತ್ತರ ಭಾರತದ ಅನೇಕ ರಾಜ್ಯಗಳು ಈ ನೈಸರ್ಗಿಕ ಅವಘಡದಿಂದ ಹಾನಿಗೊಳಗಾಗಿವೆ. ಹಿಮಾಚಲ ಪ್ರದೇಶದಲ್ಲೂ ಪರಿಸ್ಥಿತಿ ಗಂಭೀರವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಹೆಚ್ಚಿನ ಸಂಖ್ಯೆಯ ತೆರಿಗೆದಾರರು ತಮ್ಮ ದಾಖಲೆಗಳನ್ನು ಕೊನೆಯ ದಿನಾಂಕದ ಮೊದಲು ಸಲ್ಲಿಸಲು ಕಷ್ಟವಾಗುತ್ತದೆ. ಹೀಗಾಗಿ ಜು. 30ರ ಗಡುವನ್ನು ವಿಸ್ತರಿಸಬೇಕು," ಎಂದು ಸಂಘ ಒತ್ತಾಯಿಸಿದೆ.

ಏತನ್ಮಧ್ಯೆ, "ಗಡುವು ವಿಸ್ತರಣೆ ಸಾಧ್ಯತೆಗಳಿಲ್ಲ. ಶೀಘ್ರವೇ ಐಟಿಆರ್ ಸಲ್ಲಿಸಿ," ಎಂದು ಕಂದಾಯ ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ಅವರು ಇತ್ತೀಚೆಗೆ ಹೇಳಿದ್ದರು. ಆದರೆ ಭಾರಿ ಮುಂಗಾರು, ಪ್ರವಾಹ ಮತ್ತು ಮಲೆನಾಡಿನ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವ ದಿನಾಂಕವನ್ನು ವಿಸ್ತರಿಸಲು ಬೇಡಿಕೆ ಹೆಚ್ಚುತ್ತಿದೆ. ಜುಲೈ 18 ರವರೆಗೆ 3.06 ಕೋಟಿ ತೆರಿಗೆದಾರರು ಐಟಿಆರ್ ಸಲ್ಲಿಸಿದ್ದಾರೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ. ಕಳೆದ ವರ್ಷಕ್ಕಿಂತ ಪ್ರಸಕ್ತ ವರ್ಷ 7 ದಿನ ಮುಂಚಿತವಾಗಿ ಈ ಮೈಲುಗಲ್ಲು ಸಾಧಿಸಲಾಗಿದೆ.

### ತಡವಾಗಿ ಸಲ್ಲಿಸಬಹುದೇ? ಏನು ತೊಂದರೆ?

- ನಿಗದಿತ ಸಮಯಕ್ಕೆ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸದಿದ್ದರೆ ಅನೇಕ ತೊಂದರೆಗಳಾಗುತ್ತವೆ. ಒಂದೆಡೆ ನೀವು ಅನೇಕ ಪ್ರಯೋಜನಗಳಿಂದ ವಂಚಿತರಾಗುತ್ತೀರಿ. ಗಡುವಿನ ನಂತರ ಐಟಿಆರ್ ಸಲ್ಲಿಸಲು ನೀವು ದಂಡ ಪಾವತಿಸಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ದಂಡ ಶುಲ್ಕ ಸಾಕಷ್ಟು ಹೆಚ್ಚಾಗಿರುತ್ತದೆ.
- ಆದಾಯ ತೆರಿಗೆ ಇಲಾಖೆಯು ತೆರಿಗೆದಾರರಿಗೆ ತಡವಾಗಿ ಐಟಿ ರಿಟರ್ನ್ಸ್ ಫೈಲಿಂಗ್ ಮಾಡುವ ಸೌಲಭ್ಯವನ್ನು ಒದಗಿಸುತ್ತದೆ. ತಡವಾಗಿ ಐಟಿಆರ್‌ಸಲ್ಲಿಸಲು ನೀವು ದಂಡ ಶುಲ್ಕ ಪಾವತಿಸಬೇಕು.
- ಆದಾಯ ತೆರಿಗೆ ಕಾಯಿದೆ 1961ರ ಸೆಕ್ಷನ್ 139 (4) ಅಡಿಯಲ್ಲಿ ನಿಗದಿತ ದಿನಾಂಕದ ನಂತರ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವುದನ್ನು ಬಿಲೇಟೆಡ್ ಐಟಿ ರಿಟರ್ನ್ಸ್ ಎಂದು ಕರೆಯಲಾಗುತ್ತದೆ. ಪ್ರಸ್ತುತ ಅಸೆಸ್‌ಮೆಂಟ್ ವರ್ಷ ಮುಗಿಯುವ ಅಥವಾ ಅಸೆಸ್‌ಮೆಂಟ್ ವರ್ಷ ಪೂರ್ಣಗೊಳ್ಳುವ ಮೊದಲು 3 ತಿಂಗಳವರೆಗೆ ಬಿಲೇಟೆಡ್ ರಿಟರ್ನ್ಸ್ ಸಲ್ಲಿಸಬಹುದು.
- 2022-23 ಆರ್ಥಿಕ ವರ್ಷಕ್ಕೆ ಅಂದರೆ 2023-24ರ ಮೌಲ್ಯಮಾಪನ ವರ್ಷಕ್ಕೆ 2023ರ ಡಿ.31ರೊಳಗೆ ತಡವಾದ ರಿಟರ್ನ್ಸ್ ಸಲ್ಲಿಸಬಹುದು. ಅಂದರೆ, ತೆರಿಗೆದಾರರಿಗೆ ತಡವಾಗಿ ಐಟಿಆರ್ ಸಲ್ಲಿಸಲು ಗಡುವಿನ ನಂತರವೂ 5 ತಿಂಗಳುಗಳಿವೆ.

## ಒಂದು ಬ್ಯಾಂಕಿನಿಂದ ಮತ್ತೊಂದು ಬ್ಯಾಂಕಿಗೆ ಪರ್ಸನಲ್ ಲೋನ್ ಟ್ರಾನ್ಸ್‌ಫರ್ ಮಾಡೋದು ಹೇಗೆ?

ನೀವು ಒಂದು ಬ್ಯಾಂಕ್‌ನಿಂದ ವೈಯಕ್ತಿಕ ಸಾಲವನ್ನು ತೆಗೆದುಕೊಂಡಾಗ, ಅದನ್ನು ಇನ್ನೊಂದು ಬ್ಯಾಂಕ್‌ಗೆ ವರ್ಗಾಯಿಸುವ ಸೌಲಭ್ಯವೂ ನಿಮಗೆ ಸಿಗುತ್ತದೆ. ಇದನ್ನು ಬ್ಯಾಲೆನ್ಸ್ ವರ್ಗಾವಣೆ ಎಂದು ಕರೆಯಲಾಗುತ್ತದೆ. ಇದರಲ್ಲಿ, ನೀವು ವೈಯಕ್ತಿಕ ಸಾಲದಂತೆಯೇ ಹೊಸ ಸಾಲದಾತರೊಂದಿಗೆ ಯಾವುದೇ ಮೇಲಾಧಾರ ಅಥವಾ ಭದ್ರತೆಯನ್ನು ಠೇವಣಿ ಮಾಡುವ ಅಗತ್ಯವಿಲ್ಲ. ಆದಾಗ್ಯೂ, ಇದಕ್ಕಾಗಿ ನಿಮ್ಮಿಂದ ಕೆಲವು ಶುಲ್ಕಗಳನ್ನು ಸಂಗ್ರಹಿಸಲಾಗುತ್ತದೆ.

### ವೈಯಕ್ತಿಕ ಸಾಲದ ಬ್ಯಾಲೆನ್ಸ್ ವರ್ಗಾವಣೆಯ ಪ್ರಯೋಜನಗಳು!

ವೈಯಕ್ತಿಕ ಸಾಲದ ಬ್ಯಾಲೆನ್ಸ್ ವರ್ಗಾವಣೆಯ ಸೌಲಭ್ಯವನ್ನು ಒದಗಿಸುವ ಬ್ಯಾಂಕುಗಳು ಕಡಿಮೆ ಬಡ್ಡಿ ದರಗಳನ್ನು ಹೊಂದಿರುತ್ತವೆ. ಅಂತಹ ಪರಿಸ್ಥಿತಿಯಲ್ಲಿ, ನಿಮ್ಮ ಬಾಕಿ ಮೊತ್ತವು ಅಧಿಕವಾಗಿದ್ದರೆ, ಬ್ಯಾಲೆನ್ಸ್ ವರ್ಗಾವಣೆಯ ಮೇಲೆ ನೀವು ಸಾಲದ ಮೇಲೆ ಕಡಿಮೆ ಒಟ್ಟು ಬಡ್ಡಿಯನ್ನು ಪಾವತಿಸಬೇಕಾಗುತ್ತದೆ.

ಆದರೆ, ಪರ್ಸನಲ್ ಲೋನ್ ಬ್ಯಾಲೆನ್ಸ್ ವರ್ಗಾವಣೆಯು ನಿಮ್ಮ ಲೋನ್‌ಗಾಗಿ ದೀರ್ಘಾವಧಿಯನ್ನು ಆಯ್ಕೆ ಮಾಡುವ ಆಯ್ಕೆಯನ್ನು ಸಹ ನೀಡುತ್ತದೆ. ಇದು ನಿಮ್ಮ ಮಾಸಿಕ EMI ಹೊರೆಯನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಇದಲ್ಲದೆ, ನೀವು ಹೊಸ ಬ್ಯಾಂಕ್‌ನಿಂದ ಟಾಪ್-ಅಪ್ ವೈಯಕ್ತಿಕ ಸಾಲದ ಸೌಲಭ್ಯವನ್ನು ಸಹ ಪಡೆಯಬಹುದು.

### ಪರ್ಸನಲ್ ಲೋನ್ ಟ್ರಾನ್ಸ್‌ಫರ್ ಮಾಡೋದು ಹೇಗೆ?

ಪರ್ಸನಲ್ ಲೋನ್ ಬ್ಯಾಲೆನ್ಸ್ ಟ್ರಾನ್ಸ್‌ಫರ್ ಮಾಡುವ ಮೊದಲು, ನೀವು ಸಾಲದ ಪ್ರಸ್ತುತ ಬಡ್ಡಿ ದರ ಮತ್ತು ನೀವು ಸಾಲವನ್ನು ವರ್ಗಾಯಿಸಲು ಹೊರಟಿರುವ ಬ್ಯಾಂಕ್‌ನ ಬಡ್ಡಿ ದರವನ್ನು ಹೋಲಿಸಬೇಕು. ಇದರ ನಂತರ, ಬ್ಯಾಲೆನ್ಸ್ ವರ್ಗಾವಣೆ ಶುಲ್ಕಗಳು ಇತ್ಯಾದಿಗಳ ಬಗ್ಗೆ ತಿಳಿದುಕೊಳ್ಳಿ.

ಸಾಲವನ್ನು ವರ್ಗಾಯಿಸಲು, ನಿಮ್ಮ ಹಿಂದಿನ ಬ್ಯಾಂಕ್‌ನಿಂದ ನೀವು ಎನ್‌ಒಸಿ ಮತ್ತು ಸ್ವತ್ತು ಮರುಸ್ವಾಧೀನಕ್ಕೆ ಅರ್ಜಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರ ನಂತರ, ಮರುಪಾವತಿಯ ಸಂಪೂರ್ಣ ದಾಖಲೆಗಳನ್ನು ಸಲ್ಲಿಸಿ. ಈ ರೀತಿಯಾಗಿ, ಹಿಂದಿನ ಬ್ಯಾಂಕ್‌ನಿಂದ ನಿಮ್ಮ ಸಾಲದ ಖಾತೆಯನ್ನು ಮುಚ್ಚಿ ಮತ್ತು ನಿಮ್ಮ ದಾಖಲೆಗಳನ್ನು ಹೊಸ ಬ್ಯಾಂಕ್‌ಗೆ ಸಲ್ಲಿಸಿ ಮತ್ತು ಅದರೊಂದಿಗೆ ಮುಂದಿನ EMI ಅನ್ನು ಭರ್ತಿ ಮಾಡಿ.

# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ ಸುಧಾಕರ್ ಭಟ್, ಬ್ಯಾಂಕಿಂಗ್ ಸಲಹೆಗಾರರು.

**ಜೂನ್ ತಿಂಗಳಲ್ಲಿ ಭಾರತೀಯ ರಿಜರ್ವ್ ಬ್ಯಾಂಕು ಸುಸ್ತಿಸಾಲಗಳ ತಾಂತ್ರಿಕ ವಜಾ (Technical Write-off) ಬಗ್ಗೆ ಮಾರ್ಗಸೂಚಿ ಜಾರಿ ಮಾಡಿದೆ. ಈ ವಿಷಯ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಹೊಸತು. ಸುಸ್ತಿ ಸಾಲದ ತಾಂತ್ರಿಕ ವಜಾ ಎಂದರೇನು ಮತ್ತು ಸಹಕಾರ ಬ್ಯಾಂಕುಗಳಿಗೆ ಇದು ಹೇಗೆ ಸಹಕಾರಿಯಾಗಿದೆ ಎಂದು ನಮಗೆ ವಿವರಿಸಿ ಹೇಳಿ.**

**– ಶಿವ ಸಹಕಾರ ಬ್ಯಾಂಕ್ ಲಿ., ಶಿಕಾರಿಪುರ.**

**ಉತ್ತರ :** ಸುಸ್ತಿ ಸಾಲದ ವಸೂಲಾತಿ ಕ್ರಮ ಮುಂದುವರಿಸುತ್ತಿರುವಾಗಲೂ ಬ್ಯಾಂಕು ಸುಸ್ತಿ ಸಾಲದ ಖಾತೆಯನ್ನು ತೆಗೆದು ಹಾಕುವುದಕ್ಕೆ ತಾಂತ್ರಿಕ ವಜಾ ಎಂದು ಕರೆಯಲಾಗುವುದು. ಈ ಕೆಳಗಿನ ಪ್ರಶ್ನೆ ಮತ್ತು ಉತ್ತರಗಳು ಸುಸ್ತಿ ಸಾಲದ ತಾಂತ್ರಿಕ ವಜಾದ ಬಗ್ಗೆ ಅರ್ಥ ಮಾಡಿಕೊಳ್ಳಲು ಸಹಾಯಕವಾಗಬಹುದು.

**01. ಸುಸ್ತಿ ಸಾಲದ ಪೂರ್ಣ ವಜಾ (Write-off) ಮತ್ತು ತಾಂತ್ರಿಕ ವಜಾ (Technical Write-off)ಗಳಲ್ಲಿರುವ ವ್ಯತ್ಯಾಸವೇನು?**

ಉತ್ತರ: ಸುಸ್ತಿಸಾಲದ ಪೂರ್ಣ ವಜಾ ಎಂದರೆ ಬ್ಯಾಂಕು ಸುಸ್ತಿಸಾಲದ ಅಸಲು ಮತ್ತು ಬರಬೇಕಾದ ಪೂರ್ಣ ಬಡ್ಡಿಯನ್ನು ಸಾಲದ ಖಾತೆಯಿಂದ ತೆಗೆದುಹಾಕುವುದಲ್ಲದೆ, ಸಾಲ ವಸೂಲಾತಿ ಕ್ರಮವನ್ನು ಕೈಬಿಡಲಾಗುವುದು. ತಾಂತ್ರಿಕ ವಜಾ ಎಂದರೆ ಕೇವಲ ಅಸಲನ್ನು ಮಾತ್ರ ಖಾತೆಯಿಂದ ತೆಗೆದು ಹಾಕವುದಲ್ಲದೇ ಸಾಲ ವಸೂಲಾತಿ ಕ್ರಮ ಜಾರಿಯಲ್ಲಿರುವುದು. ಎರಡರಲ್ಲಿಯೂ, ಸುಸ್ತಿ ಸಾಲಕ್ಕೆ ಮಾಡಿದ ಅನುವನ್ನು ಉಪಯೋಗಿಸಿ ಖಾತೆಯನ್ನು ವಜಾ ಮಾಡಲಾಗುವುದು. ಪೂರ್ಣ ವಜಾ (Write-off) ಕೇವಲ ವಸೂಲಾತಿ ಸಾಧ್ಯವೇ ಇಲ್ಲದ ನಷ್ಟ ಖಾತೆಗಳಲ್ಲಿ ಮಾತ್ರ ಮಾಡಲಾಗುವುದು, ಆದರೆ ತಾಂತ್ರಿಕ ವಜಾ ಯಾವುದೇ ಖಾತೆಗಳಲ್ಲಿ ಮಾಡಬಹುದು.

**02. ಸುಸ್ತಿ ಸಾಲದ ತಾಂತ್ರಿಕ ವಜಾ ಮಾಡಲು ರಿಜಿಸ್ಟ್ರಾರರ ಅಥವಾ ರಿಜರ್ವ್ ಬ್ಯಾಂಕಿನ ಪೂರ್ವಾನುಮತಿ ಬೇಕೆ?**

**ಉತ್ತರ :** ತಾಂತ್ರಿಕ ವಜಾ ಮಾಡಲು ಬ್ಯಾಂಕಿನ ಆಡಳಿತ ಮಂಡಳಿಗೆ ಸಂಪೂರ್ಣ ಅಧಿಕಾರವಿದೆ. ಮಹಾಸಭೆಯ ಒಪ್ಪಿಗೆಯೂ ಬೇಕಿಲ್ಲ.

**03. ಸುಸ್ತಿ ಸಾಲದ ತಾಂತ್ರಿಕ ವಜಾ ಮಾಡುವ ಮುನ್ನ ಬ್ಯಾಂಕು ಕೈಗೊಳ್ಳಬೇಕಾದ ಕ್ರಮಗಳೇನು?**

**ಉತ್ತರ :** ಸುಸ್ತಿ ಸಾಲದ ತಾಂತ್ರಿಕ ವಜಾ ಮಾಡುವ ಮುನ್ನ ಈ ಬಗ್ಗೆ ಒಂದು ನೀತಿ (ಪಾಲಿಸಿ)ಯನ್ನು ತಯಾರಿಸುವುದು. ಅಗತ್ಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ಒಂದು ಸಾಲದ ಖಾತೆ ಸುಸ್ತಿಯಾದಾಗ, ಸುಸ್ತಿಯಾಗಲು ಸಿಬ್ಬಂದಿಯ ಕರ್ತವ್ಯಲೋಪಗಳು ಕಾರಣವಾಗಿದೆಯೇ ಎಂದು ಪರಿಶೀಲಿಸುವುದು ಅಗತ್ಯ. ಈ ಬಗ್ಗೆಯೂ ಒಂದು ನೀತಿ ತಯಾರಿಸುವುದು ಅಗತ್ಯ. ಈ ಎರಡೂ ನೀತಿಗಳು ಬೇಕಾದಲ್ಲಿ ಮಹಾಮಂಡಳದಿಂದ ಪಡೆಯಬಹುದು.

**04. ಒಂದು ಸುಸ್ತಿ ಖಾತೆ ಡೌಟ್‌ಫುಲ್ 1 ವರ್ಗದಲ್ಲಿದ್ದು, ಪೂರ್ಣ ಭದ್ರತೆಯೊಂದಿಗೆ ಬಾಕಿ ಇರುವ ಅಸಲು ರೂ.1.00 ಕೋಟಿ. ಈ ಖಾತೆಗೆ ರೂ.20ಲಕ್ಷ ಅನುವು ಮಾಡಲಾಗಿದೆ. ಈ ಸುಸ್ತಿ ಸಾಲದಲ್ಲಿ ತಾಂತ್ರಿಕ ವಜಾ ಮಾಡಬಹುದೇ?**

**ಉತ್ತರ :** ಅನುವು ಮಾಡಲಾದ ಮೊತ್ತ ರೂ.20ಲಕ್ಷ ದಷ್ಟನ್ನು ತಾಂತ್ರಿಕ ವಜಾ ಮಾಡಬಹುದು. ಆದರೆ, ಮುಂದಿನ ವರ್ಷ ಖಾತೆ ಡೌಟಫುಲ್ 2 ವರ್ಗಕ್ಕೆ ಬಂದಾಗ ಪೂರ್ತಿಸಾಲ (ರೂ.1.00 ಕೋಟಿ)ದ ಮೇಲೆ ಶೇ.30ರಷ್ಟು ಅಂದರೆ ರೂ.30ಲಕ್ಷ ಅನುವು ಮಾಡಬೇಕು. ಈಗಾಗಲೇ ಮಾಡಲಾದ ಅನುವು ರೂ.20ಲಕ್ಷ ಇರುವುದರಿಂದ ಉಳಿದ ಹಣ ರೂ.10ಲಕ್ಷವನ್ನು ಮುಂದಿನ ವರ್ಷ ಮಾಡಬೇಕು. ಇಲ್ಲಿ ನೆನಪಿಡಬೇಕಾದ ವಿಷಯವೆಂದರೆ ಮುಂದಿನ ವರ್ಷ ಖಾತೆ ಡೌಟಫುಲ್ 3 ವರ್ಗಕ್ಕೆ ಬಂದಾಗ ಮಾಡಬೇಕಾದ ಶೇ.30ರಷ್ಟು ಅನುವು ಅಂದು ಬಾಕಿ ಇರುವ ರೂ.70ಲಕ್ಷದ ಮೇಲಲ್ಲ.

**05. ಸಾಲದ ತಾಂತ್ರಿಕ ವಜಾ ಮಾಡುವುದರಿಂದ ಬ್ಯಾಂಕಿಗೆ ಆಗುವ ಲಾಭವೇನು?**

**ಉತ್ತರ :** ಸುಸ್ತಿ ಸಾಲದ ತಾಂತ್ರಿಕ ವಜಾ ಮಾಡಿದ ಮೊತ್ತಕ್ಕೆ ಆದಾಯ ತೆರಿಗೆ ವಿನಾಯಿತಿ ಇರುತ್ತದೆ. ಇದರ ಬಗ್ಗೆ ನಿಮ್ಮ ವೃತ್ತಿ ತೆರಿಗೆ ಸಲಹಾಗಾರರಿಂದ ಸಲಹೆ ಪಡೆಯಿರಿ. ತಾಂತ್ರಿಕ ವಜಾ ಮಾಡುವುದರಿಂದ ಬ್ಯಾಂಕಿನ ಒಟ್ಟು ಸುಸ್ತಿ ಸಾಲದ ಪ್ರಮಾಣ ಕಡಿಮೆಯಾಗುವುದು. ಇದರಿಂದ ಸಾರ್ವಜನಿಕರಿಗೆ ಮತ್ತು ಸದಸ್ಯರಿಗೆ ಬ್ಯಾಂಕಿನ ಆರ್ಥಿಕ ಸ್ಥಿತಿ ಬಗ್ಗೆ ಒಳ್ಳೆಯ ಅಭಿಪ್ರಾಯ ಬರುವ ಸಾಧ್ಯತೆ ಇದೆ.

**06. ಸಾಲದ ತಾಂತ್ರಿಕ ವಜಾದಿಂದಾಗುವ ದುಷ್ಪರಿಣಾಮಗಳೇನು?**

**ಉತ್ತರ :** ಸುಸ್ತಿಸಾಲದ ತಾಂತ್ರಿಕ ವಜಾ ಮಾಡಿದ ನಂತರವೂ ಸಾಲ ವಸೂಲಾತಿ ಕ್ರಮ ಜಾರಿಯಲ್ಲಿರಬೇಕಾದುದು ಸಹಜ. ಆದರೆ, ವಾಣಿಜ್ಯ ಬ್ಯಾಂಕುಗಳಲ್ಲಿ ತಾಂತ್ರಿಕ ವಜಾದ ನಂತರ ವಸೂಲಾತಿ ಕ್ರಮ ತೀರಾ ಕುಂಠಿತಗೊಂಡಿದ್ದು ಸಾರ್ವಜನಿಕರಿಗೆ ಬ್ಯಾಂಕುಗಳ ಬಗ್ಗೆ ಕೆಟ್ಟ ಅಭಿಪ್ರಾಯ ಬರುವಂತಾಗಿದೆ. ಈ ಪರಿಸ್ಥಿತಿ ಪಟ್ಟಣ ಸಹಕಾರ ಬ್ಯಾಂಕುಗಳಲ್ಲೂ ಬರುವ ಸಾಧ್ಯತೆ ಇದೆ. ಆದ್ದರಿಂದ, ತೀರಾ ಅವಶ್ಯವಿದ್ದಲ್ಲಿ, ಅದರಲ್ಲೂ ಬಹಳ ಹಿಂದಿನ ವಸೂಲಾಗದ ನಷ್ಟ ಸಾಲ (Loss Asset) ಗಳನ್ನು ಹೋಗಲಾಡಿಸಲು ತಾಂತ್ರಿಕ ವಜಾದ ಮಾರ್ಗವನ್ನು ಅನುಸರಿಸುವುದು ಉಚಿತ.

**07. ಸುಸ್ತಿ ಸಾಲದ ತಾಂತ್ರಿಕ ವಜಾ ಮಾಡಿದಾಗ ಬ್ಯಾಂಕು ತನ್ನ ಪುಸ್ತಕದಲ್ಲಿ ಯಾವ ಎಂಟ್ರಿಗಳನ್ನು ಮಾಡಬೇಕು?**

**ಉತ್ತರ :** ತಾಂತ್ರಿಕ ವಜಾ ಮಾಡುವ ಮುಖ್ಯ ಉದ್ದೇಶವೇ ಸುಸ್ತಿ ಸಾಲದ ಪ್ರಮಾಣ ಕಡಿಮೆ ಮಾಡುವುದು. ಆದ್ದರಿಂದ ಸುಸ್ತಿ ಸಾಲದ ಖಾತೆಗೆ ಮಾಡಲಾದ ಅನುವನ್ನು ಬಳಸಿ ಸುಸ್ತಿ ಸಾಲದ ಪ್ರಮಾಣ ಕಡಿಮೆ ಮಾಡಲು ಬೇಕಾದ ಎಂಟ್ರಿಯನ್ನು ಮಾಡಿ. ಇದರಿಂದ ಅನುವು ಮತ್ತು ಸುಸ್ತಿಸಾಲದ ಮೊತ್ತ ಕಡಿಮೆಯಾಗುವುದು. ಸಾಮಾನ್ಯವಾಗಿ ತಾಂತ್ರಿಕವಾಗಿ ವಜಾ ಮಾಡಲಾದ ಸಾಲದ ಗುರುತು ಉಳಿಸಲು, ಸ್ವಲ್ಪ ಮೊತ್ತವನ್ನು ಖಾತೆಯಲ್ಲಿ ಉಳಿಸಲಾಗುವುದು. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಕೇವಲ ಮುಖ್ಯ ಕಚೇರಿಯಲ್ಲಿ ಮಾತ್ರ ಈ ಎಂಟ್ರಿ ಮಾಡಲಾಗುವುದು. ಶಾಖೆಯಲ್ಲಿರುವ ಸಾಲಗಾರನ ಖಾತೆಯಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ. ಮುಂದೆ ಈ ಸಾಲಗಾರನಿಗೆ ಒ.ಟಿ.ಎಸ್ ಕೂಡಾ ನೀಡಬಹುದು.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬೆಂಗಳೂರಿನ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಟೊಮೆಟೊ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಭಾಸ್ಕರ್ ಮತ್ತು ಆತನ ಪತ್ನಿ ಸಿಂಧೂಜಾ ಅವರುಗಳನ್ನು ಬಂಧಿಸಿದ್ದಾರೆ ಮತ್ತು ಮೂರನೇ ಆರೋಪಿಗಾಗಿ ಹುಡುಕಾಟ ನಡೆಸಿದ್ದಾರೆ.
- 90 ವರ್ಷಗಳ ಹಿಂದೆ ಮೈಸೂರು ರಾಜ್ಯದಲ್ಲಿ ಮುಖ್ಯ ಬಾಣಸಿಗರಾಗಿದ್ದ ಮಾದಪ್ಪ ಅವರು ದೊರೆ ಕೃಷ್ಣರಾಜ ಒಡೆಯರ್ ಅವರಿಗೆ ಸವಿಯಲು ವಿಶೇಷವಾದ ಮೈಸೂರು ಪಾಕ್ ಮಾಡಿ ಕೊಟ್ಟಿದ್ದರು. ಇದೀಗ ವಿಶ್ವದ 50 ಸ್ವಾದಿಷ್ಟ ರುಚಿಕರ ಸಿಹಿತಿಂಡಿಗಳ ಪಟ್ಟಿ ಬಿಡುಗಡೆಯಾಗಿದ್ದು, ಅದರಲ್ಲಿ ಮೈಸೂರು ಪಾಕ್‌ಗೆ 14ನೇ ಸ್ಥಾನ ದೊರಕಿದೆ.
- ಹುಬ್ಬಳ್ಳಿಯ ಸಂಗೀತ ವಿದುಷಿ ಶಶಿಕಲಾ ದಾನಿ ಅವರು ಇಂದು ನಶಿಸುತ್ತಿರುವ ಜಲ್ ತರಂಗ್ ವಾದ್ಯ ಸಂಗೀತವನ್ನು ಆಸಕ್ತರಿಗೆ ಕಲಿಸುತ್ತಾ ತಮ್ಮ ಶಿಷ್ಯರ ಮೂಲಕ ಅದರ ಕಂಪನ್ನು ವಿಶ್ವದೆಲ್ಲೆಡೆ ಪಸರಿಸುತ್ತಿರುತ್ತಿದ್ದಾರೆ.
- ಉತ್ತರ ಕರ್ನಾಟಕದಲ್ಲಿಯೇ ವಿಶಿಷ್ಟ ರೀತಿಯ ಸೈನ್ಸ್ ಪಾರ್ಕ್ ಅನ್ನು ಗದಗದ ಚಿಕ್ಕಟ್ಟಿ ಶಾಲೆಯ ಮುಂಭಾಗದಲ್ಲಿ ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಕುತೂಹಲಕ್ಕೆ 31 ವಿಜ್ಞಾನದ ಪ್ರಾಯೋಗಿಕ ಮಾದರಿಗಳು ವಿಜ್ಞಾನದ ತತ್ವಗಳನ್ನು ಅವು ಪ್ರತಿಯೊಂದೂ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ತೋರಿಸಲಾಗಿದೆ.
- ಈ ವರ್ಷದ ಜೂನ್‌ವರೆಗೂ 87,026 ಭಾರತೀಯರು ತಮ್ಮ ಪೌರತ್ವವನ್ನು ಬಿಟ್ಟುಕೊಟ್ಟಿದ್ದಾರೆ. ಈ ರೀತಿಯಾಗಿ ಕೆಲ ವರ್ಷಗಳಲ್ಲಿ ಒಟ್ಟು 17.50 ಲಕ್ಷ ಮಂದಿ ಪೌರತ್ವ ಬಿಟ್ಟುಕೊಟ್ಟಿದ್ದಾರೆ ಎಂದು ವಿದೇಶಾಂಗ ಸಚಿವ ಎಸ್ ಜೈಶಂಕರ್ ಲೋಕಸಭೆಗೆ ತಿಳಿಸಿದ್ದಾರೆ.
- ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಚಾಲಕ ರಹಿತ ಮೆಟ್ರೊ ರೈಲು ಇದೇ ವರ್ಷದ ಕೊನೆಯಲ್ಲಿ ಸಂಚರಿಸಲಿದೆ. ಈ ಮಹತ್ವದ ಯೋಜನೆಗೆ ಬೇಕಾಗಿರುವ ಎಲ್ಲಾ ಸಿದ್ಧತೆಗಳನ್ನು ನಮ್ಮ ಮೆಟ್ರೊ ಮಾಡಿಕೊಂಡಿದೆ ಎಂಬ ಅಧಿಕಾರಿಗಳು ತಿಳಿಸಿದ್ದಾರೆ.

## ಓದುಗರ ಅನಿಸಿಕೆ...




**ಎಚ್ಚರಿಂದಿರುವುದು ಒಳಿತು :** ಇಂದು ಬಹಳಷ್ಟು ಜನರು ಸುಲಭವಾಗಿ ಸಾಲ ಸಿಗುತ್ತದೆಂಬ ಕಾರಣಕ್ಕೆ ಆನ್‌ಲೈನ್ ಆ್ಯಪ್‌ಗಳ ಮೂಲಕ ತಮ್ಮ ಆಧಾರ್, ಪಾನ್ ಹಾಗೂ ಬ್ಯಾಂಕ್ ಖಾತೆ ಸಂಖ್ಯೆಯ ವಿವರ ನೀಡಿ ಸಾಲ ಪಡೆಯುತ್ತಿದ್ದಾರೆ. ಬಳಿಕ ಲೋನ್ ಆ್ಯಪ್ ಕಂಪೆನಿಯವರು ಸಾಲಗಾರರನ್ನು ಅಧಿಕ ಬಡ್ಡಿಯ ಮೂಲಕ ಸುಲಿಗೆ ಮಾಡುತ್ತಿದ್ದಾರೆ. ಕೊಡದವನನ್ನು ಬ್ಲ್ಯಾಕ್‌ಮೇಲ್‌ಗೆ ಒಳಪಡಿಸಿ ಸುಲಿಗೆ ಮಾಡುತ್ತಿದ್ದಾರೆ. ಆದ್ದರಿಂದ ಈ ಬಗೆಯ ಸಾಲ ಪಡೆಯದೇ ಇರುವುದು ಒಳಿತು.

**ಗಣಪತಿ ಯಾಜಿ, ಮುಲ್ಕಿ**

**ರಿಸರ್ವ್ ಬ್ಯಾಂಕ್ ವಿಫಲಗೊಂಡಿದೆ :** ಫೆಬ್ರವರಿಯ ನಂತರದಲ್ಲಿ ಇಳಿಕೆ ಕಂಡಿದ್ದ ಚಿಲ್ಲರೆ ಹಣದುಬ್ಬರ ದರ ಈಗ ಜೂನ್ ತಿಂಗಳಿನಲ್ಲಿ ಶೇ.4.81ಕ್ಕೆ ಹೆಚ್ಚಳವಾಗಿದೆ. ಇದು ಮೂರು ತಿಂಗಳ ಗರಿಷ್ಠಮಟ್ಟವಾಗಿದೆ. ಧಾನ್ಯಗಳ ಬೆಲೆ ಏರಿಕೆಯು ಹಣದುಬ್ಬರ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ಒಟ್ಟಾರೆ ಎಷ್ಟೇ ಪ್ರಯತ್ನಿಸಿದರೂ ಹಣದುಬ್ಬರ ದರ ನಿಯಂತ್ರಿಸುವ ಯತ್ನದಲ್ಲಿ ರಿಸರ್ವ್ ಬ್ಯಾಂಕ್ ವಿಫಲಗೊಂಡಿದೆ.

**ನಟರಾಜ್ ಎ., ಚಿಕ್ಕಬಳ್ಳಾಪುರ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.